ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in
ಇ-ಮೇಲ್ ವಿಲಾಸ: director.ahr.kptcl@gmail.com

(2)
141

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿ025521**
**ಕಂಪನಿ ಅಧಿಕೃತ ಕಛೇರಿ:** ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009

**ಸಂಖ್ಯೆ: ಕವಿಪ್ರನಿನಿ/ಬಿ೭ಎ/ಎಸ್‌ಎ3/5474/97-98/2** **ದಿನಾಂಕ:** 13 MAY 2022

## ಸುತ್ತೋಲೆ

**ವಿಷಯ:** ವರ್ಗಾವಣೆ ಆದೇಶಗಳ ಅನುಷ್ಠಾನದ ಬಗ್ಗೆ.

------

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಅಧಿಕಾರಿಗಳನ್ನು ಮತ್ತು ನೌಕರರನ್ನು ನಿಗಮದ/ಕಂಪನಿಗಳ ಕೆಲಸಗಳ ಹಿತದೃಷ್ಟಿಯಿಂದ ವರ್ಗಾಯಿಸಿ/ಪದೋನ್ನತಿಗೊಳಿಸಿ ಆದೇಶಗಳನ್ನು ಜಾರಿಗೊಳಿಸುತ್ತಿದ್ದು, ಸದರಿ ವರ್ಗಾವಣೆ/ಪದೋನ್ನತಿಗೊಳಿಸಿದ ಸ್ಥಳಕ್ಕೆ ಅಧಿಕಾರಿಗಳು/ನೌಕರರು ಕರ್ತವ್ಯಕ್ಕೆ ಹಾಜರಾಗದಿರುವುದು ನಿಗಮದ ಗಮನಕ್ಕೆ ಬಂದಿರುತ್ತದೆ. ಮುಂದುವರೆದು, ವರ್ಗಾಯಿಸಿ/ಪದೋನ್ನತಿಗೊಳಿಸಲಾದ ಅಧಿಕಾರಿ/ನೌಕರರನ್ನು ಸಂಬಂಧಪಟ್ಟ ಮೇಲಾಧಿಕಾರಿಯು ಕಾರ್ಯ ಮುಕ್ತಿಗೊಳಿಸದಿರುವುದು ಹಾಗೂ ಸ್ಥಳನಿಯುಕ್ತಿಗೊಳಿಸಲಾದ ಜಾಗಕ್ಕೆ ಅಧಿಕಾರಿ/ನೌಕರರುಗಳು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಸೂಚಿಸದೇ ಇರುವುದು ಕಂಡು ಬಂದಿರುತ್ತದೆ. ನಿಗಮವು ಇದನ್ನು ಗಂಭೀರವಾಗಿ ಪರಿಗಣಿಸಿದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಸೂಚನೆಗಳನ್ನು ನೀಡಿದೆ:

1. ವರ್ಗಾವಣೆ/ಪದೋನ್ನತಿಗೊಳಿಸಲಾದ ಅಧಿಕಾರಿ/ನೌಕರರು ನಿಗದಿತ ಅವಧಿಯೊಳಗೆ ಸ್ಥಳ ನಿಯುಕ್ತಿಗೊಳಿಸಿದ ಜಾಗದಲ್ಲಿ ಕರ್ತವ್ಯಕ್ಕೆ ಹಾಜರಾಗುವುದು. ತಪ್ಪಿದಲ್ಲಿ, ಅಂತಹ ಅಧಿಕಾರಿಗಳ/ನೌಕರರ ವಿರುದ್ಧ ಕವಿಪ್ರನಿನಿ ನೌಕರರ ಸೇವಾ (ನಡತೆ) ನಿಬಂಧನೆಗಳು 1988 ರ ನಿಬಂಧನೆಗಳ ಅನ್ವಯ ಸೂಕ್ತ ಶಿಸ್ತು ಕ್ರಮವನ್ನು ಜರುಗಿಸಲಾಗುವುದು.
2. ವರ್ಗಾವಣೆ/ಪದೋನ್ನತಿಗೊಳಿಸಲಾದ ಅಧಿಕಾರಿ/ನೌಕರರ ಮೇಲಾಧಿಕಾರಿಗಳು ನಿಗದಿತ ಅವಧಿಯೊಳಗಾಗಿ ಸದರಿಯವರುಗಳನ್ನು ಕಾರ್ಯಮುಕ್ತಿಗೊಳಿಸಲು ಸೂಚಿಸಿದೆ. ತಪ್ಪಿದಲ್ಲಿ, ಅಂತಹ ಮೇಲಾಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಿ, ಅವರ ವಿರುದ್ಧ ಕವಿಪ್ರನಿನಿ ನೌಕರರ ಸೇವಾ (ನಡತೆ) ನಿಬಂಧನೆಗಳು 1988 ರ ನಿಬಂಧನೆಗಳ ಅನ್ವಯ ಸೂಕ್ತ ಶಿಸ್ತು ಕ್ರಮವನ್ನು ಜರುಗಿಸಲಾಗುವುದು.

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ.)**
**ಕವಿಪ್ರನಿನಿ.**

**ಮೆಮೋ**

**ಕ್ರಮಾಂಕ:ಚಾವಿಸನಿನಿ/ಆ ಮತ್ತು ಮಾ.ಸಂ./05/04/2022-23/** CYS-369 **ದಿನಾಂಕ:** 13 JUN 2022

ವರ್ಗಾವಣೆ ಆದೇಶಗಳ ಅನುಷ್ಠಾನದ ಕುರಿತು ನಿರ್ದೇಶಕರು(ಆ ಮತ್ತು ಮಾಸಂ), ಕವಿಪ್ರನಿನಿ, ಬೆಂಗಳೂರುರವರ ಆದೇಶ ಸಂಖ್ಯೆ:ಕವಿಪ್ರನಿನಿ/ಬಿ೭ಎ/ಎಸ್‌ಎ3/5474/97-98/2 ದಿನಾಂಕ:13.05.2022ರಲ್ಲಿ ಜಾರಿಗೊಳಿಸಿರುವ ಆದೇಶವನ್ನು ಚಾವಿಸನಿನಿಯಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ಆದೇಶಿಸಲಾಗಿದೆ.

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಚಾ.ವಿ.ಸ.ನಿ.ನಿ., ಮೈಸೂರು.

ಪು.ತಿ.ನೋ.

ಪ್ರತಿಗಳು:

- ಮುಖ್ಯ ಆರ್ಥಿಕ ಅಧಿಕಾರಿ, ಚಾವಿಸನಿನಿ., ಮೈಸೂರುರವರ ಅವಗಾಹನೆಗಾಗಿ.
- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಛೇರಿ, ಮೈಸೂರು.
- ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ., ಹಾಸನ/ಮೈಸೂರು.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿರವರ ಮಾಹಿತಿಗಾಗಿ.
- ಎಲ್ಲಾ ಪ್ರಧಾನ ವ್ಯವಸ್ಥಾಪಕರು, ನಿಗಮ ಕಾರ್ಯಾಲಯ, ಚಾವಿಸನಿನಿ., ಮೈಸೂರುರವರ ಮಾಹಿತಿಗಾಗಿ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ., ರವರ ಮಾಹಿತಿಗಾಗಿ ಹಾಗು ಅಗತ್ಯ ಕ್ರಮಕ್ಕಾಗಿ.
- ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್), ನಿಗಮ ಕಛೇರಿ, ಮೈಸೂರುರವರಿಗೆ ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
- ಸ-2(ಆ ಮತ್ತು ಮಾ.ಸಂ)/ಪ್ರ.ಕ.